## ಕಳಪೆ ಹಾಗೂ ನಕಲಿ ಗೊಬ್ಬರ ವಿತರಣೆ

**896 (1498); ಡಾ. ಸುಧಾಕರ್ ಕೆ. (ಚಿಕ್ಕಬಳ್ಳಾಪುರ)**

(ಅ) ಸಹಕಾರ ಇಲಾಖೆಗೆ ಸೇರಿದ ಕೆಲವೊಂದು ಸೊಸೈಟಿಗಳಿಂದ ಕಳೆದ ವರ್ಷ ರೈತರಿಗೆ ವಿತರಣೆ ಆಗಿರುವ ರಸಗೊಬ್ಬರಗಳು ನಕಲಿ ಹಾಗೂ ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ;

(ಆ) ವಿತರಣೆ ಮಾಡಿದ ಸೊಸೈಟಿಗಳಿಗೆ, ಗೊಬ್ಬರ ಪೂರೈಕೆ ಮಾಡಿದ ಕಂಪನಿ ವಿರುದ್ಧ ಕ್ರಮಕ್ಕೆ ಸರ್ಕಾರ ನಿರ್ಧರಿಸಿದೆಯೇ; ಹಾಗಿದ್ದಲ್ಲಿ, ಕ್ರಮ ಸ್ವರೂಪವೇನು:

(ಇ) ರಾಜ್ಯದ ಯಾವ ಯಾವ ಸೊಸೈಟಿಗಳಲ್ಲಿ ಈ ರೀತಿ ನಕಲಿ ಹಾಗೂ ಕಳಪೆ ಗುಣಮಟ್ಟದ ಗೊಬ್ಬರ ವಿತರಣೆ ಆಗಿದೆ (ವಿವರ ನೀಡುವುದು);

(ಈ) ಸದರಿ ಕಳಪೆ ಹಾಗೂ ನಕಲಿ ಗೊಬ್ಬರ ಬಳಸಿ ಬೆಳೆ ಬೆಳೆದು ನಷ್ಟಕ್ಕೊಳಗಾದ ರೈತರಿಗೆ ಸರ್ಕಾರ ಪರಿಹಾರ ನೀಡಲಿದೆಯೇ; ಇದಕ್ಕೆ ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ:

(ಉ) 2014–15ನೇ ಸಾಲಿನಲ್ಲಿ ಗುಣಮಟ್ಟದ ಗೊಬ್ಬರ ವಿತರಣೆಗೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ?

**ಶ್ರೀ ಹೆಚ್. ಎಸ್. ಮಹದೇವಪ್ರಸಾದ (ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು)**

(ಅ) ಕಳೆದ ವರ್ಷದಲ್ಲಿ ಸಹಕಾರ ಇಲಾಖೆಗೆ ಸೇರಿದ ಹಾಸನ ಜಿಲ್ಲೆಯ ಮೂರು ಸಹಕಾರ ಸಂಘಗಳಿಂದ ರೈತರಿಗೆ ಮಾರಾಟ ಮಾಡಿದ ರಸಗೊಬ್ಬರಗಳು ನಕಲಿ ಹಾಗೂ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ ಕುರಿತು ತೆಗೆದುಕೊಂಡ ಕ್ರಮದ ಬಗ್ಗೆ ಅನುಬಂಧದಲ್ಲಿ ಲಗತ್ತಿಸಿದೆ.

(ಆ) ಹಾಸನ ಜಿಲ್ಲೆಯ 3 ಸಹಕಾರ ಸಂಘಗಳಲ್ಲಿ ನಕಲಿ ಹಾಗೂ ಕಳಪೆ ಗುಣಮಟ್ಟದ ಎಂಒಪಿ ರಸಗೊಬ್ಬರ ರೈತರಿಗೆ ಪೂರೈಕೆ ಮಾಡಿದ ಖಾಸಗಿ ವ್ಯಕ್ತಿಗಳ ವಿರುದ್ಧ ಮತ್ತು ಸಹಕಾರ ಸಂಘಗಳ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳ ವಿರುದ್ಧವೂ ಸಹ ಕೃಷಿ ಇಲಾಖೆ, ಹಾಸನ ರವರು ಸಕಲೇಶಪುರ ಮತ್ತು ಅರೇಹಳ್ಳಿ ಪೊಲೀಸ್ ಠಾಣೆಗಳಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ.

(ಇ) ಹಾಸನ ಜಿಲ್ಲೆಯಲ್ಲಿ ಈ ಕೆಳಕಂಡ ಸಹಕಾರ ಸಂಘಗಳಲ್ಲಿ ನಕಲಿ ಎಂ.ಓ.ಪಿ. ಗೊಬ್ಬರವನ್ನು ರೈತರಿಗೆ ಮಾರಾಟ ಮಾಡಿರುವ ಬಗ್ಗೆ ವರದಿಯಾಗಿದೆ.

1. ಹಾನುಬಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.

2. ಅನುಘಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

3. ನಾರ್ವೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

(ಈ) ಮೇಲ್ಕಂಡ ಸಹಕಾರ ಸಂಘಗಳಿಂದ ರೈತರು ಪಡೆದ ಗೊಬ್ಬರದಿಂದ ಬೆಳೆ ನಾಶವಾಗಿರುವ ಬಗ್ಗೆ ರೈತರಿಂದಾಗಲೀ ಅಥವಾ ಕೃಷಿ ಇಲಾಖೆಯಿಂದಾಗಲೀ ಯಾವುದು ದೂರುಗಳು ಅಥವಾ ವರದಿಗಳು ಬಂದಿರುವುದಿಲ್ಲ.

(ಉ) 2014–15ನೇ ಸಾಲಿನಲ್ಲಿ ಗುಣಮಟ್ಟದ ರಸಗೊಬ್ಬರಗಳನ್ನು ರೈತರಿಗೆ ಸಕಾಲದಲ್ಲಿ ಪೂರೈಕೆ ಮಾಡಲು ಕೃಷಿ ಇಲಾಖೆಯಿಂದ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

ರಸಗೊಬ್ಬರ ನಿಯಂತ್ರಣ ಆದೇಶ, 1985ರ ಅನ್ವಯ ಅಧಿಕೃತ ಪರವಾನಿಗೆ ಪಡೆದ ಸಹಕಾರಿ ಸಂಘಗಳು ಮತ್ತು ಖಾಸಗಿ

ಮಾರಾಟಗಾರರ ಮೂಲಕ ರಸಗೊಬ್ಬರವನ್ನು ರೈತರಿಗೆ ವಿತರಿಸಲಾಗುತ್ತಿದೆ.

2014–15ನೇ ಸಾಲಿನ ಮುಂಗಾರು ಹಂಗಾಮಿಗೆ (ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ) ರಾಜ್ಯಕ್ಕೆ 20.50 ಲಕ್ಷ ಟನ್ ವಿವಿಧ ರಸಗೊಬ್ಬರ ಗ್ರೇಡ್‌ಗಳ ಬೇಡಿಕೆ ಇದ್ದು, ಜೂನ್ ಮಾಹೆಯ ಅಂತ್ಯಕ್ಕೆ 10.87 ಲಕ್ಷ ಟನ್ ವಿವಿಧ ಗ್ರೇಡ್‌ಗಳ ರಸಗೊಬ್ಬರ ಲಭ್ಯವಿದ್ದು, 5.02 ಲಕ್ಷ ಟನ್ ವಿತರಣೆಯಾಗಿರುತ್ತದೆ. ಪ್ರಸ್ತುತ ಸಹಕಾರ ಸಂಘಗಳು ಮತ್ತು ಖಾಸಗಿ ಮಾರಾಟ ಕೇಂದ್ರಗಳಲ್ಲಿ 5.85 ಲಕ್ಷ ಟನ್ ರಸಗೊಬ್ಬರ ದಾಸ್ತಾನು ಲಭ್ಯವಿರುತ್ತದೆ.

ರಾಜ್ಯದ ಜಿಲ್ಲೆ/ತಾಲ್ಲೂಕು/ರೈತ ಸಂಪರ್ಕ ಕೇಂದ್ರಗಳ ಮಟ್ಟದಲ್ಲಿ ರಸಗೊಬ್ಬರ ಪರಿವೀಕ್ಷಕರುಗಳು ನಿಯಮಿತವಾಗಿ ಗುಣಮಟ್ಟ ಖಾತ್ರಿ ಪಡಿಸಿಕೊಳ್ಳುವ ಸಂಬಂಧ ರಸಗೊಬ್ಬರ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಗುಣಮಟ್ಟವಿಲ್ಲವೆಂದು ಕಂಡುಬಂದಲ್ಲಿ. ರಸಗೊಬ್ಬರ ನಿಯಂತ್ರಣ ಆದೇಶ 1985ರನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಪ್ರತಿ ಜಿಲ್ಲೆಯಲ್ಲಿಯೂ ಸಹಾಯಕ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ವಿಜಿಲೆನ್ಸ್ ತಂಡಗಳನ್ನು ರಚಿಸಲಾಗಿದ್ದು. ತಂಡದ ಸದಸ್ಯರು ರಸ ಗೊಬ್ಬರ ಮಾರಾಟ ಮಳಿಗೆಗಳಿಗೆ ಆಗಿಂದಾಗ್ಗೆ ಭೇಟಿ ನೀಡಿ ಗುಣ ಮಟ್ಟದ ರಸಗೊಬ್ಬರಗಳನ್ನು ರೈತರಿಗೆ ಪೂರೈಕೆ ಮಾಡುವ ಬಗ್ಗೆ ಕ್ರಮ ವಹಿಸಲಾಗಿದೆ.

ರಾಜ್ಯದ ಎಲ್ಲಾ ಮಾರಾಟಗಾರರಿಗೆ ಜಿಲ್ಲಾ/ತಾಲ್ಲೂಕು ಮಟ್ಟಗಳಲ್ಲಿ ರಸ ಗೊಬ್ಬರ ನಿಯಂತ್ರಣ ಆದೇಶ, 1985ರ ಬಗ್ಗೆ ವಿಶೇಷ ತರಬೇತಿ ಏರ್ಪ ಡಿಸಿ, ಗುಣಮಟ್ಟದ ರಸಗೊಬ್ಬರಗಳನ್ನು ವಿತರಿಸುವ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.

## ಅನುಬಂಧ

ರಾಜ್ಯದ ಹಾಸನ ಜಿಲ್ಲೆಯನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ರೈತರಿಗೆ ಸಹಕಾರ ಸಂಘಗಳಿಂದ ಮಾರಾಟ ಮಾಡಿರುವ ರಸಗೊಬ್ಬರ ಗಳು ನಕಲಿ ಕಳಪೆಯಾಗಿರುವ ಬಗ್ಗೆ ಯಾವುದೇ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಹಾಸನ ಜಿಲ್ಲೆಯಲ್ಲಿ 3 ಸಹಕಾರ ಸಂಘಗಳಲ್ಲಿ 2013ರ ಮೇ ಮತ್ತು ಜೂನ್ ಮಾಹೆಗಳಲ್ಲಿ ನಕಲಿ ಎಂಒಪಿ ರಸ ಗೊಬ್ಬರಗಳನ್ನು ರೈತರಿಗೆ ಮಾರಾಟ ಮಾಡಿದ್ದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಒಂದು ಹಾಗೂ ಬೇಲೂರು ತಾಲ್ಲೂಕಿನ 2 ಸಹಕಾರ ಸಂಘಗಳಲ್ಲಿ ನಡೆದಿರುವ ನಕಲಿ ರಸಗೊಬ್ಬರ ಮಾರಾಟದ ಬಗ್ಗೆ ಸಂಘವಾರು ಮಾಹಿತಿ ಈ ಕೆಳಕಂಡಂತಿದೆ.

1. ಹಾನುಬಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಸಕಲೇಶಪುರ ತಾಲ್ಲೂಕ್ : ಮೇಲ್ಕಂಡ ಸಹಕಾರ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿದ್ದ ಶ್ರೀ ಎಸ್. ಪಿ. ಅಶೋಕ ಇವರು ಸಂಘದಲ್ಲಿ 2013–14 ನೇ ಸಾಲಿನಲ್ಲಿ ದಿನಾಂಕ: 01.04.2013ರಿಂದ 15.05.2013ರ ಅವಧಿಯಲ್ಲಿ 25 ಟನ್ ಎಂಒಪಿ ರಸಗೊಬ್ಬರವನ್ನು ಐ.ಪಿ.ಎಲ್. ಕಂಪನಿಯಿಂದ ಖರೀದಿಸಿ, ದಿನಾಂಕ: 15.05.2013ರ ವರೆಗೆ ರೈತರಿಗೆ ಮಾರಾಟ ಮಾಡಿದ ಒಟ್ಟಾರೆ 19.75 ಟನ್ ಪ್ರಮಾಣದ ರಸಗೊಬ್ಬರದಲ್ಲಿ ಸಂಘವು ರೈತರಿಗೆ ಕಳಪೆ ಗುಣಮಟ್ಟದ ಎಂಒಪಿ ರಸಗೊಬ್ಬರ ವನ್ನು ಮಾರಾಟ ಮಾಡಿರುವ ಬಗ್ಗೆ ರೈತರಿಂದ ಬಂದ ದೂರು ಗಳಂತೆ. ಕೃಷಿ ಅಧಿಕಾರಿ, ರೈತರ ಸಂಪರ್ಕ ಕೇಂದ್ರ, ಹಾನುಬಾಳು ಇವರು ಸಂಘಕ್ಕೆ ದಿನಾಂಕ: 15.05.2013 ರಂದು ಭೇಟಿ ನೀಡಿ ಪರಿಶೀಲಿಸಿದಾಗ, ಸಂಘದ ದಾಸ್ತಾನಿನಲ್ಲಿದ್ದ 110 ರಸಗೊಬ್ಬರ ಚೀಲಗಳಲ್ಲಿ ನಕಲಿ ರಸಗೊಬ್ಬರ ಎಂದು ಕಂಡು ಬಂದ ಕಾರಣ

ಸದರಿಯವರು ವಿಶ್ಲೇಷಣೆಗಾಗಿ ಗೊಬ್ಬರ ಮಾದರಿಯನ್ನು ರಸ ಗೊಬ್ಬರ ನಿಯಂತ್ರಣ ಪ್ರಯೋಗಾಲಯ. ಬೆಂಗಳೂರು ಇಲ್ಲಿಗೆ ಕಳುಹಿಸಿದ್ದು, ಪ್ರಯೋಗಾಲಯವು ನೀಡಿದ ವರದಿಯಂತೆ, ಮಾರಾಟವಾದ ಎಂಒಪಿ. ಗೊಬ್ಬರ ಕಳಪೆ ಮಟ್ಟದ್ದೆಂದು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ. ಶ್ರೀ ಅಶೋಕ ರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾ ಗಿದ್ದು, ಪ್ರಕರಣ ಸಂಖ್ಯೆ 104/2013 ದಿನಾಂಕ: 18.05.2013 ಆಗಿರುತ್ತದೆ. ಈ ಸಂಬಂಧ ಸಂಘದ ಆಡಳಿತ ಮಂಡಳಿಯು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಅಶೋಕ್ ರವರನ್ನು ಸೇವೆಯಿಂದ ಅಮಾನತ್ತುಗೊಳಿಸಿರುತ್ತದೆ.

ಸಂಘದಲ್ಲಿ ನಕಲಿ ಗೊಬ್ಬರ ಮಾರಾಟದಿಂದ ಆಗಿರುವ ನಷ್ಟ ಮತ್ತು ಅವ್ಯವಹಾರಗಳ ಬಗ್ಗೆ ಪರಿಶೀಲಿಸಿ ವರದಿ ನೀಡಲು ಸಹ ಕಾರ ಸಂಘಗಳ ಕಾಯ್ದೆ ಕಲಂ 64 ರಂತೆ ವಿಚಾರಣೆಗೆ ಆದೇಶಿ ಸಿದ್ದು, ವಿಚಾರಣಾಧಿಕಾರಿಗಳ ವರದಿಯಂತೆ ನಕಲಿ ರಸಗೊಬ್ಬರ ವಿತರಣೆ ಮಾಡಿದ ಎಲ್ಲಾ ರೈತರಿಗೆ ಬದಲಿ ಗೊಬ್ಬರವನ್ನು ಸಂಘದ ಕಾರ್ಯದರ್ಶಿ ನೀಡಿರುತ್ತಾರೆ.

ಸಂಘವು ಅನಧಿಕೃತ ಸಂಸ್ಥೆಯಿಂದ ಗೊಬ್ಬರ ಖರೀದಿಸಿರುವು ದರಿಂದ ಸಂಘದ ಆಡಳಿತ ಮಂಡಳಿಯವರ ವಿರುದ್ಧ ಕಾಯಿದೆ 29 ಸಿ ರನ್ವಯ ಕ್ರಮ ಕೈಗೊಂಡ ಹಿನ್ನೆಲೆಯಲ್ಲಿ ಸಂಘದ ಅಧ್ಯ ಕ್ಷರು ಹಾಗೂ 5 ಜನ ನಿರ್ದೇಶಕರು ರಾಜೀನಾಮೆ ನೀಡಿದ್ದು, ಸಂಘದ ಆಡಳಿತ ನಿರ್ವಹಣೆ ದೃಷ್ಟಿಯಿಂದ ಕಾಯಿದೆ ಕಲಂ 31(1) ರನ್ವಯ ವಿಶೇಷಾಧಿಕಾರಿಯನ್ನು ನೇಮಿಸಲಾಗಿರುತ್ತದೆ. ಈ ಸಂಬಂಧ ವಿಶೇಷಾಧಿಕಾರಿಯವರು ಆಡಳಿತ ಮಂಡಳಿ ರಚನೆ ಕ್ರಮ ಕೈಗೊಂಡಿದ್ದು. ಸಂಘಕ್ಕೆ ಚುನಾವಣೆ ನಡೆದಿದ್ದು. ದಿನಾಂಕ: 30.12.2013 ರಿಂದ ನೂತನ ಆಡಳಿತ ಮಂಡಳಿ ಅಸ್ತಿತ್ವದಲ್ಲಿ ರುತ್ತದೆ.

ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಸ್. ಪಿ. ಅಶೋಕ್ ರವರ ವಿರುದ್ಧ ಹೂಡಿರುವ ಮೊಕದ್ದಮೆ ಸಂಬಂಧ ಕೃಷಿ ಇಲಾಖಾಧಿಕಾರಿಗಳು ಸಹಕಾರ ಇಲಾಖಾ ಅನುಮತಿಯೊಡನೆ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಅನುಷ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬೇಲೂರು ತಾಲ್ಲೂಕ್ : ಮೇಲ್ಕಂಡ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿದ್ದ ಶ್ರೀ ಜಯರಾಂ ಇವರು ಆದರ್ಶ ಆಗ್ರೋ ಟ್ರೇಡರಸ್, ಚನ್ನರಾಯಪಟ್ಟಣ ಇವರಿಂದ 16 ಟನ್ ಮಂಗಳ ಎಂಒಪಿ ಗೊಬ್ಬರವನ್ನು (ಅನಧಿಕೃತ ಸಂಸ್ಥೆಯಾಗಿರುತ್ತದೆ) ಅಂದರೆ 320 ಚೀಲ ಗೊಬ್ಬರ ` 2,70,200/– ಗಳಲ್ಲಿ ಖರೀದಿ ಸಿದ್ದು. ಈ ಪೈಕಿ 176 ಚೀಲ ಗೊಬ್ಬರವನ್ನು 14 ಜನ ರೈತರಿಗೆ `1,58,400/– ಗಳಿಗೆ ಮಾರಾಟ ಮಾಡಿದ್ದು, ರೈತರಿಂದ ಬಂದ ದೂರಿನ ಮೇರೆಗೆ ದಿನಾಂಕ: 25.05.2013 ರಂದು ಸಹಾಯಕ ಕೃಷಿ ನಿರ್ದೇಶಕರು, ಬೇಲೂರು ಇವರ ಸಂಘಕ್ಕೆ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಿದ ಸಂದರ್ಭದಲ್ಲಿ ಸಂಘದಲ್ಲಿ ಉಳಿದಿದ್ದ 144 ಚೀಲ ಗೊಬ್ಬರದಲ್ಲಿ ಗೊಬ್ಬರ ಕಳಪೆ ಮಟ್ಟದ್ದೆಂದು ಕಂಡು ಬಂದ ಹಿನ್ನೆಲೆಯಲ್ಲಿ ಸಂಘಕ್ಕೆ ನೋಟೀಸ್ ನೀಡಿ. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿರುತ್ತಾರೆ. ಮೊಕದ್ದಮೆ ಸಂಖ್ಯೆ : 93/2013 ದಿನಾಂಕ: 29.05.2013ರಂದು ದಾಖಲಾಗಿರುತ್ತದೆ. ಉಳಿದ 144 ಚೀಲ ಪೊಲೀಸ್ ವಶಕ್ಕೆ ಪಡೆದಿದ್ದು, ಈ ಸಂಬಂಧ ಸದರಿಯವರನ್ನು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹುದ್ದೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ.

ಸಂಘದಲ್ಲಿ ನಕಲಿ ಗೊಬ್ಬರ ಖರೀದಿಯಿಂದ ಆಗಿರುವ ನಷ್ಟ ಹಾಗೂ ಅವ್ಯವಹಾರದ ಕಲಂ 64ರ ಅಡಿ ವಿಚಾರಣೆ ನಡೆಸಿದೆ ವಿಚಾರಣಾಧಿಕಾರಿಯವರ ವರದಿಯಂತೆ ನಕಲಿ ಗೊಬ್ಬರ

ಖರೀದಿಯಿಂದ ಅದ ನಷ್ಟ `2,80,000/–ಗಳನ್ನು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಂದ ವಸೂಲಾತಿಗೆ ಜವಾಬ್ದಾರಿ ನಿಗದಿಪಡಿಸಿರುತ್ತಾರೆ. ಈ ಬಗ್ಗೆ ಸಹಾಯಕ ನಿಬಂಧಕರು, ಸಕಲೇಶಪುರ ರವರು ಕಲಂ 68ರ ಆದೇಶ ಹೊರಡಿಸಿ ವಸೂಲಾತಿಗೆ ಕ್ರಮವಿಡಲು ಸಂಘಕ್ಕೆ ನಿರ್ದೇಶಿಸಲಾಗಿದೆ.

ಸಂಘದಲ್ಲಿ ಅನಧಿಕೃತ ಸಂಸ್ಥೆಯಿಂದ ನಕಲಿ ಗೊಬ್ಬರ ಖರೀದಿಸಿ ರೈತರಿಗೆ ಮಾರಾಟ ಮಾಡಿ ನಷ್ಟ ಉಂಟು ಮಾಡಿರುವುದರಿಂದ ಸಂಘದ ಅಧ್ಯಕ್ಷರನ್ನು ಸಹಕಾರ ಸಂಘಗಳ ಕಾಯ್ದೆ ಕಲಂ 29ಸಿ ರನ್ವಯ 5 ವರ್ಷದ ಅವಧಿಗೆ ಅನರ್ಹಗೊಳಿಸಿ ಆದೇಶಿಸ ಲಾಗಿದೆ.

ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ. ಎಸ್. ಜಯರಾಂ ರವರ ವಿರುದ್ಧ ಹೂಡಿರುವ ಮೊಕದ್ದಮೆ ಸಂಬಂಧ ಕೃಷಿ ಇಲಾಖಾಧಿಕಾರಿಗಳು ಸಹಕಾರ ಇಲಾಖಾ ಅನುಮತಿಯೊಡನೆ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ನಾರ್ವೇ ಪ್ರಾಥಮಿಕ ಕೃಷಿ ಪತ್ತಿಹ ಸಹಕಾರ ಸಂಘ ನಿ. ಬೇಲೂರು ತಾಲ್ಲೂಕ್ : ಮೇಲ್ಕಂಡ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಹೇಮರಾಜ್ ಇವರು 15 ಟನ್ ನಕಲಿ ಎಂಒಪಿ ರಸಗೊಬ್ಬರವನ್ನು (300 ಚೀಲಗಳನ್ನು) ಖರೀದಿಸಿ, 300 ಚೀಲಗಳನ್ನು ಪೂರ್ಣವಾಗಿ ಮಾರಾಟ ಮಾಡಿ ರುತ್ತಾರೆ. ಗೊಬ್ಬರ ಮಾರಾಟದ ನಂತರ ರೈತರುಗಳ ದೂರಿನ ಮೇರೆಗೆ ದಿನಾಂಕ: 3.6.2013 ರಂದು ಸಹಾಯಕ ಕೃಷಿ ನಿರ್ದೇಶಕರು, ಹಾಸನ (ವಿಜಿಲೆನ್ಸ್) ಇದರ ಸಹಾಯಕ ನಿಬಂಧಕರು, ಸಕಲೇಶಪುರ ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ, ಬೇಲೂರು ರವರೊಡನೆ ಸಂಘಕ್ಕೆ ಭೇಡಿ ನೀಡಿ ಪರಿಶೀಲಿಸಲಾಗಿ, ಸಂಘದಿಂದ ಮಾರಾಟವಾದ ಗೊಬ್ಬರ ಸ್ಯಾಂಪಲ್‌ನ್ನು ಕೃಷಿ

ಪ್ರಯೋಗಾಲಯ ಬೆಂಗಳೂರು ರವರಿಗೆ ಕಳುಹಿಸಲಗಿದ್ದು, ಸಂಘದಲ್ಲಿ ಮಾರಾಟವಾದ ಗೊಬ್ಬರ ನಕಲಿಯೆಂದು ದೃಢಪಟ್ಟ ಕಾರಣ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀ ಹೇಮರಾಜ್ ರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ (ಸಂಖ್ಯೆ/101/2013 ದಿನಾಂಕ: 13.06.2013) ದಾಖಿಸಲಾಗಿದ್ದು, ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

ಸಂಘದಲ್ಲಿ ನಕಲಿ ಗೊಬ್ಬರ ಮಾರಾಟದಿಂದ ಆಗಿರುವ ನಷ್ಟ ಹಾಗೂ ಅವ್ಯವಹಾರಗಳ ಬಗ್ಗೆ ಸಹಕಾರ ಸಂಘಗಳ ಕಾಯಿದೆ ಕಲಂ 64ರ ವಿಚಾರಣೆಗೆ ಆದೇಶಿಸಿದ್ದು, ವಿಚಾರಣಾಧಿಕಾರಿ ಯವರು ವರದಿಯಲ್ಲಿ 300 ಚೀಲ ಗೊಬ್ಬರವನ್ನು ಸಂಘದ ಕಾರ್ಯದರ್ಶಿ ಸ್ವಂತ ಹಣದಿಂದ ಖರೀದಿಸಿರುತ್ತಾರೆ. ನಂತರ ಎಲ್ಲಾ ರೈತರಿಗೆ ಹಣವನ್ನು ವಾಪಸ್ ನೀಡಿರುವುದಾಗಿ ತಿಳಿಸಿರು ತ್ತಾರೆ.

ಸಂಘದಲ್ಲಿ ಅನಧಿಕೃತ ಸಂಸ್ಥೆಯಿಂದ ನಕಲಿ ಗೊಬ್ಬರ ಖರೀದಿಸಿ ರೈತರಿಗೆ ಮಾರಾಟ ಮಾಡಿ ನಷ್ಟ ಉಂಟು ಮಾಡಿರುವುದರಿಂದ ಸಂಘದ ಅಧ್ಯಕ್ಷರನ್ನು ಸಹಕಾರ ಸಂಘಗಳ ಕಾಯ್ದೆ ಕಲಂ 29 ಸಿ ರನ್ವಯ 5 ವರ್ಷದ ಅವಧಿಗೆ ಅನರ್ಹಗೊಳಿಸಿ ಆದೇಶಿಸಲಾ ಗಿದೆ.

ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹೇಮರಾಜ್ ರವರ ವಿರುದ್ಧ ಹೂಡಿರುವ ಮೊಕದ್ದಮೆ ಸಂಬಂಧ ಕೃಷಿ ಇಲಾಖಾಧಿಕಾರಿಗಳು ಸಹಕಾರ ಇಲಾಖಾ ಅನುಮತಿಯೊಡನೆ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಸಹಕಾರ ಸಂಘಗಳಲ್ಲಿ ನಕಲಿ ಗೊಬ್ಬರ ಖರೀದಿ ಮಾರಾಟದ ಪ್ರಕರಣಗಳಲ್ಲಿ ರೈತರಿಗೆ ಆಗಿರುವ ಬೆಳೆ ನಾಶ, ಅಥವಾ ಆರ್ಥಿಕ ನಷ್ಟಗಳ ವಿಷಯವಾಗಿ ಲಿಖಿತ ವರದಿಗಳು

ನೇರ ರೈತರಿಂದಾಗಲೀ, ಕೃಷಿ ಇಲಾಖಾಧಿಕಾರಿಗಳಿಂದಾಗಲೀ ಯಾವುದೇ ದೂರುಗಳು ಅಥವಾ ವರದಿಗಳು ಬಂದಿರುವುದಿಲ್ಲ.

**ಕೃಷಿ ಯಂತ್ರೋಪಕರಣಗಳ ಸಹಾಯಧನ**

**897 (1499); ಡಾ. ಸುಧಾಕರ್ ಕೆ. (ಚಿಕ್ಕಬಳ್ಳಾಪೂರ)**

(ಅ) ರಾಜ್ಯದಲ್ಲಿ ಕೃಷಿ ಇಲಾಖೆಯ ವತಿಯಿಂದ ರೈತರಿಗೆ ಒದಗಿಸುವ ಕೃಷಿ ಯಂತ್ರೋಪಕರಣ ಹಾಗೂ ವಾಹನ ಖರೀದಿಗೆ ಸಹಾಯಧನ ನೀಡ ಲಾಗುತ್ತಿದೆಯೇ; ನೀಡುತ್ತಿದ್ದರೆ ವಿವರಗಳನ್ನೊದಗಿಸುವುದು;

(ಆ) ಯಾವ ಯೋಜನೆ ಅಡಿ ಯಂತ್ರೋಪಕರಣ ಹಾಗೂ ವಾಹನ ಖರೀಧಿಸಬಹುದು; ಇದಕ್ಕೆ ಎಷ್ಟು ಸಹಾಯಧನ ದೊರೆಯುತ್ತದೆ;

(ಇ) ಸರ್ಕಾರದಿಂದ ಕಳೆದ ಮೂರು ವರ್ಷದಲ್ಲಿ ಎಷ್ಟು ಸಹಾಯಧನ ಕೃಷಿಕರಿಗೆ ವಿತರಣೆ ಆಗಿದೆ; ವರ್ಷವಾರು ವಿವರ ನೀಡುವುದ;

(ಈ) ಸಹಾಯಧನ ನೀಡಿಕೆಯಲ್ಲಿ ವಿಳಂಬವಾಗುತ್ತಿದೆ ಎನ್ನುವ ಆರೋಪವಿರುವುದು ನಿಜವೇ; ಹಾಗಾದರೆ, ತ್ವರಿತವಾಗಿ ಸಹಾಯಧನ ವಿತರಿಸಲು ಕೈಗೊಂಡ ಕ್ರಮ ಏನು;

(ಉ) ಸಹಾಯಧನ ನೀಡಿಕೆ ಸಂದರ್ಭ ಯಾವ ಮಾದರಿಯಲ್ಲಿ, ಮಾನ ದಂಡದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ;

(ಊ) ಈಗಾಗಲೇ ಈ ಸೌಲಭ್ಯದ ಸದುಪಯೋಗ ಪಡೆದುಕೊಂಡಿರುವ ರೈತರ ಸಂಖ್ಯೆ ಎಷ್ಟು; ಜಿಲ್ಲಾವಾರು ಅಂಕಿ ಅಂಶ ನೀಡುವುದು?

**ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)**

(ಅ) ಕೃಷಿ ಇಲಾಖೆಯಲ್ಲಿ ಕೃಷಿ ಯಾಂತ್ರೀಕರಣ ಕಾರ್ಯಕ್ರಮದಡಿ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ, ಒದಗಿಸಲಾಗುತ್ತಿದೆ. ವಿವರ ಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ. ಕೃಷಿ ಇಲಾಖೆಯಲ್ಲಿ ವಾಹನ ಖರೀದಿಗೆ ಯಾವುದೇ ಸಹಾಯಧನ ನೀಡುತ್ತಿಲ್ಲ.